POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 8.2.2026



# ಹೆಬ್ಬಗೋಡಿಯ ಕನ್ನಡ ಹಬ್ಬದಲ್ಲಿ ರವಿಚಂದ್ರನ್ ಕ್ರೇಜಿ ಹಾಡುಗಳ ಮೋಡಿ

ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟರ ಬಣ ಆಯೋಜಿಸಿದ್ದ ಕನ್ನಡಿಗರ ಹಬ್ಬಕ್ಕೆ ಕಳೆದ ಶನಿವಾರ ಸಂಜೆ ಹಿರಿಯ ನಟ ರವಿಚಂದ್ರನ್ ಚಾಲನೆ ನೀಡಿದರು. ಹಬ್ಬದ ಪ್ರಯುಕ್ತ ನಡೆದ ರವಿಚಂದ್ರನ್ ಸಿನಿಮಾ ಗೀತೆಗಳ ಗಾಯನ ಪ್ರೇಕ್ಷರದಲ್ಲಿ ಮೋಡಿ ಮಾಡಿದವು. ಯುವಗಾಯಕಿ ಅಂಕಿತ ಕುಂಡು ಹಾಡಿದ ರಾಮಚಾರಿ ಚಿತ್ರದ 'ಆಕಾಶದಾಗೆ ಯಾರೋ ಮಾಯಗಾರನು....' ಶ್ರೀಹರ್ಷ ಮತ್ತು ಅಂಕಿತ ಕುಂಡು ಜೋಡಿ ಕಂಠಿದಲ್ಲಿ ಮೂಡಿದ ಬಂದ ಶ್ರೀರಾಮಚಂದ್ರ ಚಿತ್ರ 'ಗಗನದಲ್ಲಿ ಮಳೆಯ ದಿನ ಗುಡುಗಿನ ತನನ...' ಹಾಡಿಗೆ ಪ್ರೇಕ್ಷಕರು ಫಿಧಾ ಆದರು.

ಶ್ರೀಹರ್ಷ ಹಾಡಿದ 'ಮಲ್ಲ' ಸಿನಿಮಾದ 'ಕರುನಾಡೇ ಕರುನಾಡೇ', ಯುಗ ಪುರುಷ ಚಿತ್ರದ 'ಯಾವುದೋ ಈ ಗೊಂಬೆ ಯಾವುದೋ',ಮನೆ ದೇವ್ರು ಚಿತ್ರದ 'ಸುಂದರಿ ಸುಂದರಿ ಸುಂದರಿ' ಸೇರಿದಂತೆ ವಿವಿಧ ಗೀತೆಗಳು ಪ್ರೇಕ್ಷಕರನ್ನು ನಿಜವಾಗಿಯೂ ಪ್ರೇಮಲೋಕಕ್ಕೆ ಕರೆದ್ಯೊಯ್ದವು.

ಹೆಬ್ಬಗೋಡಿಯ ಎಸ್‌ಎಫ್‌ಎಸ್ ಶಾಲೆಯ ವಿಶಾಲ ಮೈದಾನ ಸಂಗೀತ ಪ್ರಿಯರಿಂದ ತುಂಬಿ ತುಳುಕುತ್ತಿತ್ತು. ಸಂಗೀತ ರಸದೌತಣ ಸವಿಯಲು ಬೆಂಗಳೂರು ದಕ್ಷಿಣ,ಆನೇಕಲ್ ತಾಲ್ಲೂಕಿನ ನಾನಾ ಕಡೆಗಳಿಂದ ಜನ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ನಿರೂಪಕಿ ಅನುಶ್ರೀ ಅವರು ಪ್ರತಿ ಹಾಡಿನ ನಂತರ ರವಿಚಂದ್ರನ್ ಅವರಿಗೆ ಈ ಹಾಡು ಸೂರ್ತಿಯಾಗಲು ಕಾರಣ ಕೇಳುತ್ತಾ ಪ್ರೇಕ್ಷಕರನ್ನು ರಂಜಿಸಿದರು.



ಗಾಯಕರಾದ ಹೇಮಂತ್, ಅನುರಾಧ ಭಟ್, ಅಶ್ವಿನ್ ಶರ್ಮ, ಶ್ರೀಹರ್ಷ, ಅಂಕಿತಾ ಕುಂಡು, ಶಿವಾನಿ, ಲಕ್ಷ್ಮೀ ವಿಜಯ್ ಗಾಯನ ನಡೆಸಿಕೊಟ್ಟರು. ಅಂತರರಾಷ್ಟ್ರೀಯ ಡ್ರಮ್ ವಾದಕ ಅರುಣ್‌ಕುಮಾರ್ ಡ್ರಮ್ ವಾದನ ನಡೆಸಿಕೊಟ್ಟರು. ಮಾರನೇ ದಿನ ಭಾನುವಾರ ಅರ್ಜುನ್ ಜನ್ಯ ಮತ್ತು ತಂಡದವರು ಸಂಗೀತ ಸಂಭ್ರಮ ನಡೆಸಿಕೊಟ್ಟರು. ಐಶ್ವರ್ಯ ರಂಗ ರಾಜನ್, ಪೃಥ್ವಿ ಭಟ್, ದರ್ಶನ್, ಸುನೀಲ್, ವ್ಯಾಸರಾಜ್ ಮತ್ತು ತಂಡದವರು ಆಕರ್ಷಕ ಗೀತೆಗಳನ್ನು ಪ್ರಸ್ತುತ ಪಡಿಸಿದರು. ಕರವೇ ಬಳಗ ಪ್ರತಿವರ್ಷ ಹೆಬ್ಬಗೋಡಿಯಲ್ಲಿ ಹಮ್ಮಿಕೊಳ್ಳುವ 'ಕನ್ನಡಿಗರ ಹಬ್ಬ'ದಲ್ಲಿ ವಿಶೇಷವಾಗಿ ಕನ್ನಡ ಪ್ರೇಮಗೀತೆಗಳ ಮೂಲಕ ಅನ್ಯಭಾಷಿಕರಿಗೆ ಕನ್ನಡದ ಮಹತ್ವ ಸಾರುತ್ತಿರುವುದು ವಿಶೇಷವಾಗಿದೆ. ಮುಖ್ಯ ಅತಿಥಿ ರವಿಚಂದ್ರನ್ ಮಾತನಾಡಿ, 'ನಮ್ಮ ಕನ್ನಡ ಭಾಷೆಯನ್ನು ಪ್ರತಿಯೊಬ್ಬರಿಗೂ ತಲುಪಿಸಬೇಕಾದುದ್ದು ನಮ್ಮ ಜವಾಬ್ದಾರಿಯಾಗಿದೆ. ಬಹುತೇಕ ಎಲ್ಲಾ ಕಾರ್ಯಕ್ರಮದಲ್ಲಿಯೂ ಅರ್ಧ ಗಂಟೆ ಇರುತ್ತಿದೆ. ಆದರೆ ಇಲ್ಲಿ ರವಿಚಂದ್ರನ್ ಚಿತ್ರ ಗೀತೆಗಳ ಗಾಯನ ಇರುವುದರಿಂದ ಹೆಚ್ಚು ಸಮಯ ಕಳೆಯುತ್ತಿದ್ದೇನೆ' ಎಂದು ಹೇಳಿದರು.

ಆನೇಕಲ್ ತಾಲ್ಲೂಕು ಗಡಿಭಾಗದಲ್ಲಿದ್ದರು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬರವಿಲ್ಲ. ಪ್ರತಿ ವರ್ಷ ಕನ್ನಡಿಗರ ಹಬ್ಬದಲ್ಲಿ ಖ್ಯಾತ ಗಾಯಕರನ್ನು ಕರೆಯಿಸಿ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಗಡಿಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಾಗಬೇಕು ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು. ಅವತ್ತು ಅಲ್ಲಿ ಆನೇಕಲ್ ಶಾಸಕ ಬಿ. ಶಿವಣ್ಣ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಮಿಕರ ಘಟಕದ ಅಧ್ಯಕ್ಷ ಎಚ್.ಎಂ. ಅಂಬರೀಷ್, ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಜಿಗಣಿ ಬಿಜೆಪಿ ಕೌನ್ಸಿಲರ್ ಪುನೀತ್ ಮತ್ತು ಗಟ್ಟಹಳ್ಳಿ ಸೀನಪ್ಪ ಮುಂತಾದವರಿದ್ದರು.

# ಎತ್ತ ನೋಡಿದ್ರು ಸಲಿಂಗ ಸಂಕಟ!!

ಮೊನ್ನೆಯಷ್ಟೇ 17 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಮುಗಿಯಿತು. ಮಾಮೂಲಿನಂತೆ ಪ್ರತಿದಿನ ನಾಲ್ಕರಿಂದ ಐದು ಸಿನಿಮಾ ನೋಡುತ್ತಿದ್ದೆ. ನನಗೆ ಮಾತ್ರವಲ್ಲ, ಎಲ್ಲರಿಗೂ ಈ ಚಿತ್ರೋತ್ಸವ ವಿಶೇಷ. ಈ ಜಗತ್ತಿನ ಬೇರೆ ಬೇರೆ ದೇಶಗಳ ಆಚಾರ, ವಿಚಾರ, ಜನ ಜೀವನ, ಅವರ ಕಷ್ಟಸುಖಗಳು, ಇವತ್ತಿನ ಜಗದ ಬಿಕ್ಕಟ್ಟುಗಳು ಮಂತಾದವುಗಳನ್ನು ಅರಿಯಲು ಇರುವ ಒಂದು ಅವಕಾಶವಿದು. ಹಾಗಾಗಿ ನಾನು ಭಾರತೀಯ ಸಿನಿಮಾಗಳನ್ನು ಅಷ್ಟಾಗಿ ನೋಡುವುದಿಲ್ಲ. ನೋಡಬಾರದು ಅಂತ ಅಲ್ಲ, ಅವುಗಳನ್ನು ಮುಂದೆ ಯಾವಾಗ ಬೇಕಿದ್ರೂ ನೋಡಬಹುದು.....




ಡಾ.ರಾಜ್ ಕುಮಾರ್ ಅವರ ಹಳೆಯ ಸಿನಿಮಾಗಳನ್ನು ಮಾತ್ರ ಜಿದ್ದಿಗೆ ಬಿದ್ದು ನೋಡಿ ಕೊಳ್ಳುತ್ತೇವೆ, ಅದು ಬೇರೆ ರೀತಿಯ ಅಭಿಮಾನ ಬಿಡ್ರಿ! ಅದಿರಲಿ, ಪ್ರತಿ ವರ್ಷ ಇಲ್ಲಿಗೆ ಅಂದ್ರೆ, ಚಿತ್ರೋತ್ಸವಕ್ಕೆ ಆಗಮಿಸುವ ಪ್ರೇಕ್ಷಕರು ಆಡುವ ಒಂದು ಕಾಮನ್ ಮಾತು ಏನಪ್ಪ ಅಂದ್ರೆ 'ಹೋದ ವರ್ಷ ಸಿನಿಮಾಗಳು ತುಂಬಾ ಚೆನ್ನಾಗಿದ್ದು, ಈ ವರ್ಷ ಅಷ್ಟು ಚೆನ್ನಾಗಿಲ್ಲ' ಅನ್ನುವುದು! ಪ್ರತಿ ವರ್ಷ 300 ರಿಂದ400 ಸಿನಿಮಾಗಳು ಪ್ರದರ್ಶನವಾಗುತ್ತವೆ. ಒಬ್ಬ ಪ್ರೇಕ್ಷಕ ಅತಿ ಹೆಚ್ಚು ಅಂದ್ರೆ 40 ಸಿನಿಮಾ ನೋಡಬಹುದು ಅಷ್ಟೇ. ಅದರಲ್ಲಿ ಅವನ ಅಭಿರುಚಿಗೆ ಇಷ್ಟವಾಗುವ ಎಷ್ಟು ಸಿನಿಮಾಗಳು ಅವನಿಗೆ ನೋಡಲು ಸಿಗಬಹುದು? ಮತ್ತು ಒಬ್ಬನಿಗೆ ಇಷ್ಟವಾಗುವ ಸಿನಿಮಾ ಇನ್ನೊಬ್ಬನಿಗೆ ಇಷ್ಟವಾಗಲೇಬೇಕು ಅನ್ನುವ ನಿಯಮವೇನಿಲ್ಲ. ಹಾಗಾಗಿ ಅವನಿಗೆ ಸಿಕ್ಕಿದ ಸಿನಿಮಾಗಳ ಆಧಾರದ ಮೇಲೆ ಅವನು ತನ್ನ ಜಡ್ಜ್‌ಮೆಂಟ್ ಕೊಡುತ್ತಾನೆ.

ಬಹಳ ಸಿನಿಮಾಗಳನ್ನು ನೋಡಿದ ಮೇಲೆ, ಪ್ರತಿವರ್ಷ ನನಗೆ ಮೂಡುವ ಒಂದು ಕಾಮನ್ ಅಭಿಪ್ರಾಯ ಏನಪ್ಪ ಅಂದ್ರೆ 'ಈ ಜಗತ್ತಿನ ಎಲ್ಲಾ ಮನುಷ್ಯರ ಆಲೋಚನೆಗಳು ಒಂದೇ ಥರ ಇದ್ದಾವೆ' ಅನ್ನುವುದು!!! ಜಾತಿ,ಮತ,ಧರ್ಮ.ವರ್ಣ ಯಾವುದೇ ಇರಲಿ ಅಲ್ಲಿ ಜನರಲ್ಲಾಗಿ ಕಾಣುವುದು ಬಡವಶ್ರೀಮಂತ ಮತ್ತು ಗಂಡು ಹೆಣ್ಣು ಅನ್ನುವ ವ್ಯತ್ಯಾಸಗಳು ಮಾತ್ರ! ಯಾವ ಬಡವನು ಸುಖವಾಗಿಲ್ಲ, ಯಾವ ಶ್ರೀಮಂತನೂ ನೆಮ್ಮದಿಯಾಗಿಲ್ಲ ಅನ್ನುವುದು ಇನ್ನೊಂದು ಸತ್ಯ!!

ಬಡ ದೇಶಗಳ ಸಂಕಷ್ಟಗಳೇ ಬೇರೆ, ಶ್ರೀಮಂತ ದೇಶಗಳ ಸಂಕಟಗಳೇ ಬೇರೆ! ಈ ಬಾರಿ ಐದಾರು ಫ್ರೆಂಚ್ ಮತ್ತು ಪೋರ್ಚುಗೀಸ್ ಸಿನಿಮಾಗಳನ್ನು ನೋಡಿದೆ. ಕಥೆ ಬೇರೆ ಬೇರೆ ಥರ ಇದ್ದರೂ ಒಂದು ಕಾಮನ್ ಫ್ಯಾಕ್ಟರ್ ಏನಪ್ಪ ಅಂದ್ರೆ, ಈ ಎಲ್ಲಾ ಸಿನಿಮಾಗಳಲ್ಲಿ ಬರುವ ಗಂಡುಹೆಣ್ಣುಗಳು ಸಲಿಂಗ ಕಾಮಿಗಳು! ಇಡೀ ದೇಶವೇ ಸಲಿಂಗಿ ಆಗಿಬಿಟ್ಟಿದೆಯೆ??? ಅನ್ನುವ ಅನುಮಾನ ನನ್ನದು!!! ಶ್ರೀಮಂತ ದೇಶಗಳ ಜನ ಜೀವನ, ಅವರ ಬಿಕ್ಕಟ್ಟುಗಳು, ಅವರ 'ಸಂಬಂಧ ಸಂಕಟ'ಗಳನ್ನು ನೋಡಿದರೆ, ಕೂಳಿಗಾಗಿ ಹೊಡೆದಾಡಿಕೊಳ್ಳುವ ಬಡ ದೇಶಗಳೇ ನೆಮ್ಮದಿಯಾಗಿವೆ ಅಂತನ್ನಿಸುತ್ತದೆ...

# ರಕ್ಕಸ ಪುರದೋಳ್....ಎಂಬ ಸಸ್ಪೆನ್ಸ್ ಕ್ರೈಂ ಥ್ರಿಲ್ಲರ್

ರವಿ ಸಾರಂಗ ನಿರ್ದೇಶನದ, ರಾಜ್ ಬಿ. ಶೆಟ್ಟಿ ನಟನೆಯ 'ರಕ್ಕಸ ಪುರದೋಳ್' ಒಂದು ವಿಭಿನ್ನ ಕ್ರೈಂ ಥ್ರಿಲ್ಲರ್. ಹಳ್ಳಿಯಲ್ಲಿ ನಡೆಯುವ ಸರಣಿ ಕೊಲೆಗಳನ್ನು ತನಿಖೆ ಮಾಡುವ ಕಥಾವಸ್ತು. ಮಾನಸಿಕ ಸಂಘರ್ಷ ಮತ್ತು 'ಕೊಳ್ಳಿ ದೆವ್ವ'ದ ದಂತಕತೆಯನ್ನು ಬೆರೆಸಿದೆ. ರಾಜ್ ಶೆಟ್ಟಿಯ ನಟನೆ ಬಗ್ಗೆ ಹೇಳುವಂತೆಯೇ ಇಲ್ಲ. ಅರ್ಜುನ್ ಜನ್ಯ ಹಿನ್ನೆಲೆ ಸಂಗೀತ ಅದ್ಭುತವಾಗಿದೆ. ಮೊದಲಾರ್ಧ ನಿಧಾನವಾಗಿಯೇ ಸಾಗಿದರೂ ಸೆಕೆಂಡ್ ಆಫ್ ಸ್ಪೀಡ್ ಮತ್ತು ರೋಚಕವಾಗಿದೆ. ಹಳ್ಳಿಯೊಂದರಲ್ಲಿ ನಿಗೂಢವಾಗಿ ನಡೆಯುವ ಮಹಿಳೆಯರ ಕೊಲೆಗಳು ಮತ್ತು ಆ ಗ್ರಾಮದ ಜನರಲ್ಲಿನ 'ಕೊಳ್ಳಿ ದೆವ್ವ'ದ ಭಯದ ಸುತ್ತ ಚಿತ್ರಕಥೆ ಸುತ್ತುತ್ತದೆ. ಸಸ್ಪೆಂಡೆಡ್ ಪೊಲೀಸ್ ಆಫೀಸರ್ ಶಿವ (ರಾಜ್ ಬಿ. ಶೆಟ್ಟಿ) ಸ್ವಯಂ ಪ್ರೇರಿತನಾಗಿ ತನಿಖೆ ನಡೆಸುತ್ತಾನೆ. ಅವರ ಸಂಯಮದ ನಟನೆಯೇ ಚಿತ್ರದ ಬೆನ್ನೆಲುಬು... ಉಳಿದಂತೆ ಗೋಪಾಲಕೃಷ್ಣ ದೇಶಪಾಂಡೆ, ಬಿ. ಸುರೇಶ್ ಮತ್ತು ಅನಿರುದ್ಧ ಭಟ್ ಗಮನಾರ್ಹ ಪಾತ್ರಗಳನ್ನು ನಿರ್ವಹಿಸಿದ್ದಾರೆ. ರವಿ ಸಾರಂಗ ಅವರಿಗೆ ಇದು ಚೊಚ್ಚಲ ನಿರ್ದೇಶನ. ಮೊದಲ ಪ್ರಯತ್ನವೇ ಪ್ರಭಾವಶಾಲಿಯಾಗಿದೆ.




ಒಟ್ಟಾರೆ ಇದೊಂದು ಸ್ಲೋಬರ್ನ್ ಸಸ್ಪೆನ್ಸ್ ಥ್ರಿಲ್ಲರ್. ಚಿತ್ರದ ಆರಂಭದಲ್ಲಿ ಸ್ವಲ್ಪ ನಿಧಾನವೆನಿಸಿದರೂ, ತನಿಖೆ ಮುಂದುವರೆದಂತೆ ಆಸಕ್ತಿ ಹೆಚ್ಚಿಸುತ್ತದೆ. ತಾಂತ್ರಿಕವಾಗಿ ಉತ್ತಮವಾಗಿ ಮೂಡಿಬಂದಿರುವ ಈ ಚಿತ್ರವು ನೋಡಲೇಬೇಕಾದ ಸಸ್ಪೆನ್ಸ್ ಕ್ರೈಂ ಥ್ರಿಲ್ಲರ್. ಶಿವನ ತನಿಖೆಯು ಅವನ 'ಸ್ಕಿಜೋಫ್ರೇನಿಯಾ'ದಿಂದ ಜಟಿಲವಾಗಿದ್ದು, ನೋಡುಗರಿಗೆ ಕಿಕ್ ಏರಿಸುತ್ತದೆ ಮತ್ತು ಸತ್ತವರೊಂದಿಗೆ 'ಸಂಪರ್ಕ' ಮಾಡಲು ಅನುವು ಮಾಡಿಕೊಡುತ್ತದೆ!! ಅಂದಹಾಗೆ, ಇದು ಖ್ಯಾತ ಸ್ಟಂಟ್ ಮಾಸ್ಟರ್ ರವಿ ವರ್ಮ ನಿರ್ಮಾಣದ ಚಿತ್ರ. ರಾಜ್ ಬಿ. ಶೆಟ್ಟಿ ಇಚ್ಛೆಯಂತೆ ಕಡಿಮೆ ಬಜೆಟ್‌ನಲ್ಲಿ ಉತ್ತಮ ಸಿನಿಮಾ ಕೊಟ್ಟಿದ್ದಾರೆ.

Vol. 41 No. 36 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==